ಸಮಾಧಿಸ್ಥಿತಿಯಲ್ಲಿರುತ್ತಿದ್ದ ನನ್ನ ಗುರುಗಳು ಒಮ್ಮೊಮ್ಮೆ ಸಿಟ್ಟು ಬಂತೆಂದರೆ ದೂರ್ವಾಸ ಮುನಿ ಕೂಡ ಆಗುತ್ತಿದ್ದರು.

ಯಾರಾದರೂ ಶಿಷ್ಯರು ಒಳ್ಳೆಯ ಬರವಣಿಗೆ ಮಾಡಿದರೆ ಹತ್ತು ಕಡೆ ಹೇಳಿಕೊಂಡು ಅಡ್ಡಾಡುತ್ತಿದ್ದರು. ಅನೇಕ ವೇದಿಕೆಗಳಲ್ಲಿ ಅವರ ಲೇಖನ, ಕವಿತೆ ಉಲ್ಲೇಖಿಸಿ ಹುರಿದುಂಬಿಸುತ್ತಿದ್ದರು. 'ಶಿಷ್ಯನೇ ಗುರುವಾದ, ಗುರುವೇ ಶಿಷ್ಯನಾದ' ಅಂತ ಬೀಗುತ್ತಿದ್ದರು. ಶಿಷ್ಯರನ್ನು ಕವಿಗೋಷ್ಠಿಗೆ ಕರೆದುಕೊಂಡು ಹೋಗುವುದು ಅವರಿಗೆ ಪ್ರಿಯವಾದ ಕೆಲಸ. ಮೇ ಒಂದು ಕಾರ್ಮಿಕ ದಿನಾಚರಣೆ. ಆವಾಗ ಕವಿಗೋಷ್ಠಿಯನ್ನು ಏರ್ಪಡಿಸುತ್ತಿದ್ದರು. ಅದರಲ್ಲಿ ಕವಿಗಳೂ ನಾವೆ, ಕೇಳುಗರೂ ನಾವೆ. ಕೊನೆಯಲ್ಲಿ ಅವರದೊಂದು ದೀರ್ಘ ಭಾಷಣ ಮತ್ತು ಹಾಡು. ಯಾರಾದರೂ ಹೋರಾಟಗಾರರು ಆಸ್ಪತ್ರೆ ಸೇರಿದರೆ ವಿದ್ಯಾರ್ಥಿಗಳೊಂದಿಗೆ ದೌಡಾಯಿಸುತ್ತಿದ್ದರು. ಅವರ ಜೊತೆ ಅನೇಕ ಸಲ ಕಲಬುರಗಿಯ ಸರಕಾರಿ ಆಸ್ಪತ್ರೆಗೆ ನಾನು ಹೋಗಿದ್ದೆ. ಜನರಲ್ ವಾರ್ಡಿನಲ್ಲಿದ್ದ ಹೋರಾಟಗಾರರೊಬ್ಬರನ್ನು ಉದ್ದೇಶಿಸಿ 'ಕಾಮ್ರೇಡ್, ನಿಮಗೇನೂ ಆಗುವುದಿಲ್ಲ. ನೀವು ಹುಲಿ. ಆರಾಮಾಗಿ ಬನ್ನಿ. ಇನ್ನೂ ಹೋರಾಟ ಬಾಕಿಯಿದೆ' ಅಂತ ಬೆನ್ನುತಟ್ಟಿ ಅಲ್ಲಿಯೇ ಅಂಬೇಡ್ಕರ್ ಪದವೊಂದನ್ನು ಹಾಡಿದರು. ವಾರ್ಡಿನಲ್ಲಿದ್ದ ಹಸಿ ಬಾಣಂತಿಯರು, ರೋಗಿಗಳು ಅವರ ಬಂಧುಬಾಂಧವರು ತದೇಕಚಿತ್ತದಿಂದ ಇವರನ್ನೇ ಆಲಿಸುತ್ತಿದ್ದರು. ಆಮೇಲೆ ಗುರುಗಳು ಆ ಹೋರಾಟಗಾರರಿಗೆ ತಮ್ಮ ಹೊಸ ಸಂಕಲನ ಕೊಟ್ಟು ಇದನ್ನು ಓದಲೇಬೇಕೆಂದು ತಾಕೀತುಮಾಡಿದರು. ತಮ್ಮೊಳಗೇನೆ ಏನೋ ಗುನುಗುತ್ತ ಹೊರಬಂದರು. ಅವರ ಹಿಂದೆ ನಾನೂ ಹೆಜ್ಜೆ ಹಾಕಿದೆ. ಒಮ್ಮೊಮ್ಮೆ ಈ ವ್ಯಕ್ತಿ ಈ ಲೋಕದವರಲ್ಲ ಅನ್ನಿಸುತ್ತಿತ್ತು.

ಅವರ ಜೊತೆ ನಾನೊಮ್ಮೆ ಮೈಸೂರಿಗೆ ಹೋಗಿದ್ದೆ. ಸರ್ಕಾರಿ ಕಾರ್ಯಕ್ರಮ. ಇಬ್ಬರೂ ಒಂದೇ ಲಾಡ್ಜಿನಲ್ಲಿ ಉಳಿದುಕೊಂಡಿದ್ದೆವು. ಆವಾಗ ನಾನು ಎಂ.ಎ. ಅಂತಿಮ ವರ್ಷದ ವಿದ್ಯಾರ್ಥಿ. ಆಟೋದಲ್ಲಿ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ತಲುಪಿದೆವು. ಆಟೊ ದುಡ್ಡು ಇಪ್ಪತ್ತು ರೂಪಾಯಿ. ನಾನು ಕೊಡಲು ಹೋದೆ. ಆಗ ವಾಲೀಕಾರರು 'ತಮ್ಮಾ ಬೇಡ. ನೀನು ವಿದ್ಯಾರ್ಥಿ. ನಿಮ್ಮಂಥವರು ದುಡ್ಡು ಕೊಡಬಾರದು. ನೀವು ಗಳಿಸುವಾಗ ಬೇಕಾದರೆ ಕೊಡುವಿರಂತೆ. ಈಗ ಬೇಡ' ಎಂದರು. ನಾನು ಸುಮ್ಮನಾದೆ. ಆಮೇಲೆ ಅವರು ಆಟೋದವನಿಗೆ ಹತ್ತು ರೂಪಾಯಿ ಕೊಟ್ಟರು. ಅವನು 'ಸರ್ ಇಪ್ಪತ್ತು ರೂಪಾಯಿ ಕೊಡಬೇಕು' ಅಂದ. ಆಗ ವಾಲೀಕಾರರು ನನ್ನೆಡೆಗೆ ತಿರುಗಿ 'ತಮ್ಮಾ, ನೀನು ಹತ್ತು ರೂಪಾಯಿ ಕೊಡು. ಸಮಾನತೆ, ಸಮಾನತೆ. ನಾನು ಹತ್ತು ರೂಪಾಯಿ, ನೀನು ಹತ್ತು ರೂಪಾಯಿ. ನಾವು ಯಾವಾಗಲೂ ಸಮಾನತೆಯ ತತ್ವ ಬಿಡಬಾರದು. ಸಮಾನತೆ ಇದ್ದಾಗ ಮಾತ್ರ ದೇಶ ಉದ್ಧಾರವಾಗುವುದು, ಬಡವರ ಬದುಕು ಹಸನಾಗುವುದು, ನಮ್ಮ ಸಂವಿಧಾನ ಕೂಡ ಸಮಾನತೆಗೆ ಮಹತ್ವ ಕೊಟ್ಟಿದೆ' ಎಂದರು. ನಾನು ಹತ್ತು ರೂಪಾಯಿ ಕೊಟ್ಟು ಅವರ ಸಮಾನತೆಯ ತತ್ವ ಪಾಲಿಸಿದೆ.

ವಿದ್ಯಾರ್ಥಿಗಳನ್ನು ಮನೆಗೆ ಕರೆಸಿಕೊಂಡು ಊಟ ಹಾಕಿಸುವುದು, ಕವಿತೆ ಓದಿಸುವುದು ಅವರಿಗೆ ಸದಾ ಪ್ರಿಯವಾದ ಕೆಲಸ. ನಾವು ನಾಲ್ಕೈದು ಜನ ಅವರ ಮನೆಯಲ್ಲಿ ಸೇರುತ್ತಿದ್ದೆವು. ಕನ್ನಡಕ್ಕೆ ಅನುವಾದಗೊಂಡ ಕವಿತೆಗಳನ್ನು ಹೆಚ್ಚಾಗಿ ಓದಿಸುತ್ತಿದ್ದರು. ಇದರಿಂದ ನಮಗೂ ಕೆಲ ಕಾವ್ಯಪಾಠ ಗೊತ್ತಾದವು. ಒಬ್ಬೊಬ್ಬರು ಹದಿನೈದು ಇಪ್ಪತ್ತು ಕವಿತೆಗಳನ್ನು ಓದಬೇಕಾಗಿತ್ತು. ಅವರ ಮನೆಯ ಮಾಳಿಗೆಯ ಮೇಲಿನ ಕೋಣೆಯಲ್ಲಿ ದುಂಡಗೆ ಕೂತು ಕವಿತೆಗಳ ವಾಚನ ನಡೆಯುತ್ತಿತ್ತು. ಕವಿತೆ ಓದುವವರು ಅವರ ಪಕ್ಕವೇ ಕುಳಿತಿರಬೇಕು. ಯಾವುದಾದರೂ ಕವಿತೆಯ ಸಾಲು ಚೆನ್ನಾಗಿದ್ದರೆ ಇನ್ನೊಮ್ಮೆ ಓದಲು ಹೇಳುತ್ತಿದ್ದರು. ಅನೇಕ ಸಲ ಸಂತೋಷದಿಂದ 'ವಾಹ್...' ಎಂದು ಓದುವವರ ಬೆನ್ನಿಗೊಂದು ಗುದ್ದು ಹಾಕುತ್ತಿದ್ದರು. ಕವಿತೆಗಳ ಸಾಮರ್ಥ್ಯದ ಮೇಲೆ ಈ ಗುದ್ದುಗಳ ಸಂಖ್ಯೆಯಲ್ಲಿ ಏರುಪೇರಾಗುತ್ತಿತ್ತು. ನಾನು ಸ್ವಲ್ಪ ಚೆನ್ನಾಗಿ ಓದುತ್ತಿದ್ದುದರಿಂದ ಹೆಚ್ಚು ಕವಿತೆಗಳನ್ನು ಓದುವ ಸರದಿ ನನ್ನದೇ ಆಗಿತ್ತು. ಜೊತೆಗೆ ಹೆಚ್ಚು ಗುದ್ದುಗಳನ್ನು ಕೂಡ ಪಡೆಯುತ್ತಿದ್ದೆ. ಆರಂಭದಲ್ಲಿ ಏನೂ ಅನಿಸುತ್ತಿರಲಿಲ್ಲ. ಆಮೇಲೆ ಒಂದೆರಡು ಬಾರಿ ಬೆನ್ನು ಚೂರು ಪಿಟಪಿಟ ಎಂದು ನೋಯತೊಡಗಿತು. ಹೀಗಾಗಿ ಎಲ್ಲೆಲ್ಲಿ ಆಕರ್ಷವಾದ ಸಾಲುಗಳಿರುತ್ತಿದ್ದವೊ ಅವುಗಳನ್ನು ಕೊಂಚ ಅನಾಕರ್ಷಕವಾಗಿ ಓದುತ್ತಿದ್ದೆ.